ಉಗಾದಿ ಹಬ್ಬ ಮುಗಿದ ಮೂರನೇ ದಿನ ರಾತ್ರಿ ತಿರುಪತಿಗೆ ಹೊರಡುವುದೆಂದು ನಿರ್ಧಾರ ಆಯಿತು. ಎಲ್ಲ ಸಿದ್ಧತೆಗಳು ಆದವು. ಬಸ್ಸುಗಳು ಹೊರಡುವುದೊಂದೇ ಬಾಕಿ. ರಾತ್ರಿ ಹನ್ನೆರಡಕ್ಕೆ ಯಾತ್ರೆ ಶುರುವಾಗುತ್ತೆ. ಹನ್ನೊಂದು ಗಂಟೆ ಹೊತ್ತಿಗೆ ಎಲ್ಲರೂ ಬಸ್ಸಿನ ಬಳಿ ಬಂದರೆ ಸಾಕು. ಒಂದು ಬಸ್ಸು ಮಾತ್ರ ಎಸ್‌ಪಿ ಸಾಹೇಬರ ಮನೆಯ ಮುಂಭಾಗದಿಂದ ಹೊರಡುತ್ತೆ. ಹನ್ನೆರಡೂಕಾಲು ಹೊತ್ತಿಗೆ ಅದು ಮುನಿಸಿಪಲ್ ಹೈಸ್ಕೂಲ್ ಮೈದಾನದ ರಸ್ತೆಗೆ ಬರುತ್ತೆ. ಅಲ್ಲಿಂದ ಮೂರೂ ಬಸ್ಸುಗಳು ಒಟ್ಟಿಗೆ ಹೊರಡುವುದೆಂದು ತೀರ್ಮಾನವಾಯಿತು.

ಆದರೆ ಅವತ್ತು ರಾತ್ರಿ ಎಂಟರ ಹೊತ್ತಿಗೆ ಬಿಸ್ಕೆಟ್ ಫ್ಯಾಕ್ಟರಿ ಹಿಂಭಾಗದಲ್ಲಿ ಹೊಸದಾಗಿ ಶುರುವಾಗಿರೋ ಕನಕ ದುರ್ಗಾ ಕಾಟನ್ ಅಂಡ್ ಜಿನ್ನಿಂಗ್ ಮಿಲ್‌ನಲ್ಲಿ ಎರಡು ಗುಂಪುಗಳ ನಡುವೆ ಸಣ್ಣ ಕಾರಣಕ್ಕೆ ಜಗಳ ಶುರುವಾಯಿತು. ಹತ್ತಿ ಬೇಲುಗಳನ್ನು ಅನ್‌ಲೋಡ್ ಮಾಡುತ್ತಿದ್ದ ಇಬ್ಬರು ಹಮಾಲಿಗಳು ಮತ್ತು ಮಿಲ್‌ನ ಮೂರ್ನಾಲ್ಕು ಜನರ ನಡುವೆ ಶುರುವಾದ ಜಗಳ ಹೊಡೆದಾಟಕ್ಕೆ ತಿರುಗಿತು.

ಹೆಚ್ಚು ಕಡಿಮೆ ಅದೇ ಹೊತ್ತಿಗೆ ಮೋತಿ ಸಿನಿಮಾ ಥೇಟರ್ ರಸ್ತೆಯಲ್ಲಿ ಸ್ಕೂಟರಿನಲ್ಲಿ ಬರುತ್ತಿದ್ದ ಮಾಜಿ ಕಾರ್ಪೋರೇಟರ್ ಅನ್ವರ್ ಖುದ್ದೂಸ್ ಮೇಲೆ ಯಾರೋ ಸಣ್ಣದೊಂದು ಕಂಟ್ರಿ ಬಾಂಬ್ ಎಸೆದು, ಕೆಳಕ್ಕೆ ಕೆಡವಿ ಕೊಚ್ಚಿ ಕೊಲೆ ಮಾಡಿದರು. ಕೊಲೆ ಮಾಡಿದವರು ಪರಾರಿ ಆಗದೆ, ಹೆಣ ಬಿದ್ದ ಸ್ಥಳದ ಹತ್ತಿರದಲ್ಲಿದ್ದ ಪೆಟ್ಟಿಗೆ ಅಂಗಡಿ ಬಳಿ ಕುಳಿತು ಸೋಡಾ ಕುಡಿಯುತ್ತಿದ್ದರಂತೆ! ಪೊಲೀಸರು ಅವನ್ನು ಅರೆಸ್ಟ್ ಮಾಡಿದರು. ಕೋಮು ಗಲಭೆ ಆಗಬಾರದೆಂದು ಆ ಏರಿಯಾದಲ್ಲಿ ಮೂರು ದಿನ ನಿಷೇಧಾಜ್ಞೆ ಜಾರಿ ಮಾಡಿದರು.

ಆದರೆ ಕಾಟನ್ ಮಿಲ್‌ನಲ್ಲಿ ಶುರುವಾದ ಜಗಳ ತಣ್ಣಗಾಗಲಿಲ್ಲ. ಎಸ್‌ಪಿ ಸಾಹೇಬರೇ ಸ್ಥಳಕ್ಕೆ ಬಂದರು. ಕೇಶವರೆಡ್ಡಿಗೆ ಫೋನ್ ಮಾಡಿ ಸ್ಥಳಕ್ಕೆ ಕರೆಸಿಕೊಂಡರು. ಮಿಲ್ ಆಫೀಸಿನಲ್ಲೇ ಕಾರ್ಮಿಕರು ಮತ್ತು ಹಮಾಲಿಗಳ ಸಂಘಗಳ ಮುಖಂಡರ ಜತೆ ಮಾತುಕತೆಗೆ ಮುಂದಾದರು. ಗಂಟೆ ಹನ್ನೆರಡಾಗುತ್ತ ಬಂದರೂ ಮೀಟಿಂಗ್ ಮುಗಿಯುವ ಲಕ್ಷಣ ಕಾಣುತ್ತಿಲ್ಲ. ಮಧ್ಯದಲ್ಲೇ ರೆಡ್ಡಿ, ಎಸ್‌ಪಿ ಸಾಹೇಬರ ಬಳಿ ಬಂದು ಅವರಿಗಷ್ಟೇ ಕೇಳಿಸುವಂತೆ ತಿರುಪತಿಗೆ ಹೊರಟಿರುವ ಒಂದು ಬಸ್ಸು ನಿಮ್ಮ ಬಂಗಲೆ ಹತ್ತಿರ ಹೋಗಿದೆ. ದಯವಿಟ್ಟು ಮೇಡಂ ಅವರಿಗೆ ಅಥವಾ ನಿಮ್ಮ ತಾಯಿಯವರಿಗೆ ಒಂದು ಮಾತು ಹೇಳಿ ಸಾರ್. ಅವರೇ ಗೇಟಿನವರೆಗೆ ಬಂದು ಯಾತ್ರೆ ಉದ್ಘಾಟನೆ ಮಾಡಲಿ... ಐದೇ ನಿಮಿಷ. ಬಸ್ಸಿನ ಹತ್ತಿರ ಬಂದು ಒಂದು ಈಡುಗಾಯಿ ಒಡೆದರೆ ಸಾಕು ಎಂದು ಬಿನ್ನವಿಸಿಕೊಂಡ.

ಸಂಜೆ ನಾಲ್ಕರ ಹೊತ್ತಿನಲ್ಲಿ ವೆಂಕಟಗಿರಿ, ರಾಜಮೌಳಿಯ ಹೊಸ ಸಿನಿಮಾ ನೋಡಿ ಬರುತ್ತೇನೆ ಎಂದು ಹೇಳಿ ಹೋದವನು ರಾತ್ರಿ ಹನ್ನೊಂದಾದರೂ ಬರಲಿಲ್ಲ. ಓನರ್ ಮನೆಯ ಜಗುಲಿಯ ಮೇಲೆ ಅವನ ಹಾಸಿಗೆ ಹಾಸಿದ ಮುತ್ಯಾಲ ಅದರ ಮಗ್ಗುಲಲ್ಲೇ ಚಾಪೆ ಹಾಕಿಕೊಂಡು ಮಲಗಿದ.

ನಿತ್ಯ ಏಳು ಗಂಟೆ ಹೊತ್ತಿಗೆ ಏಳುವ ಅಭ್ಯಾಸವಿದ್ದ ವೆಂಕಟಗಿರಿಗೆ ಅವತ್ತು ಎಂಟಾದರೂ ಎಚ್ಚರವಾಗಲಿಲ್ಲ. ಮುತ್ಯಾಲನೇ ಮೈಮುಟ್ಟಿ ಎಬ್ಬಿಸಬೇಕಾಯಿತು.

ನಿನ್ನೆ ರಾತ್ರಿ ನಮ್ಮ ಭಾವ ಬಂದಿದ್ದರು. ಲಕ್ಷ್ಮಿಯನ್ನು ಹೆರಿಗೆಗೆ ಅಂತ ಊರಿಗೆ ಕರಕೊಂಡು ಹೋದರು. ಜತೆಯಲ್ಲಿ ಅಕ್ಕನನ್ನೂ. ನೀನು ಮುಖ ತೊಳೆದುಕೊಂಡು ಬಾ. ಹೋಟೆಲಿಗೆ ಹೋಗಿ ಏನಾದರೂ ತಿಂದು ಬರೋಣ ಎಂದು ಹೇಳುತ್ತ ವೆಂಕಟಗಿರಿಯ ಮುಖ ನೋಡಿದ.

ಮುಖ ತೊಳೆಯಲು ಬಚ್ಚಲಿಗೆ ಅಂತ ಮನೆಯೊಳಕ್ಕೆ ಹೋದ ವೆಂಕಟಗಿರಿ ಅಚ್ಚರಿ ಕಾದಿತ್ತು. ಮನೆಯಲ್ಲಿ ಸಾಮಾನುಗಳಿಲ್ಲ! ಹಿಂದೆಯೇ ಬಂದ ಮುತ್ಯಾಲ, ನಾವು ಇವತ್ತು ರಾತ್ರಿ ಬಸ್ಸಿಗೆ ನಾವು ಕಡಪಾಕ್ಕೆ ಹೋಗಬೇಕಂತೆ. ಪೆದ್ದಾಯನ ಹೇಳಿದರಂತೆ. ನಿನ್ನೆ ಸಂಜೆ ಬಾಲಗೋವಿಂದ ಬಂದು ಹೇಳಿ